# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 98 | Pages. 2 | Date: 18-03-2026, WEDNESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 98 - ಪುಟಗಳು : 2 | 18-03-2026 | ಬುಧವಾರ | Ph: 8762954248 | ದರ : ₹1


# ಇಂದಿನಿಂದ ಏ. 2ರ ವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ

## ಜಿಲ್ಲಾದ್ಯಂತ 78 ಪರೀಕ್ಷಾ ಕೇಂದ್ರ | ಶಾಂತಿಯುತ ಪರೀಕ್ಷೆಗೆ ಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ. 18ರ ಬುಧವಾರದಿಂದ ಆರಂಭವಾಗಲಿದ್ದು ಸಾರ್ವಜನಿಕ ಶಿಕ್ಷಣ ಇಲಾಖೆ ಅಗತ್ಯ ಸಿದ್ಧತೆ ಮಾಡಿಕೊಂಡಿದೆ.


ಜಿಲ್ಲೆಯಲ್ಲಿ 19,718 ಹೊಸ ವಿದ್ಯಾರ್ಥಿಗಳು, 343 ಖಾಸಗಿ, 615 ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 74 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿ ಒಟ್ಟು 20,750 ಮಂದಿ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

ಪರೀಕ್ಷೆಯು ಮಾ.18ರಿಂದ ಏ.2ರ ವರೆಗೆ ಪ್ರತಿದಿನ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.15ರ ವರೆಗೆ ಜಿಲ್ಲೆಯಲ್ಲಿ ಒಟ್ಟು 78 ಕೇಂದ್ರಗಳಲ್ಲಿ ನಡೆಯಲಿದೆ. ಹಾಸನ ನಗರದಲ್ಲಿ 16, ಆಲೂರು 5, ಅರಸೀಕೆರೆ 11, ಅರಕಲಗೂಡು 9, ಬೇಲೂರು 7, ಚನ್ನರಾಯಪಟ್ಟಣ 12, ಹೊಳೆನರಸೀಪುರ 9, ಸಕಲೇಶಪುರ ತಾಲ್ಲೂಕಿನಲ್ಲಿ 9 ಕೇಂದ್ರ ತೆರೆಯಲಾಗಿದೆ.

### ನಿಷೇಧಾಜ್ಞೆ ಜಾರಿ

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯನ್ನು ಸಂಬಂಧಿತ ಕಾನೂನು ಪ್ರಕಾರ ನಿಷೇಧಿತ ಪ್ರದೇಶವಾಗಿ ಘೋಷಿಸಲಾಗಿದೆ. ಪ್ರತಿಯೊಂದು ಕೇಂದ್ರದಲ್ಲೂ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳ ಸುತ್ತಲಿನ ಝೆರಾಕ್ಸ್ ಹಾಗು ಸೈಬರ್ ಕೇಂದ್ರಗಳನ್ನು ಮುಚ್ಚುವಂತೆ ಸೂಚಿಸಲಾಗಿದೆ.

ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ



ಇತರೆ ಸಿಬ್ಬಂದಿಗೆ ಮೊಬೈಲ್ ಬಳಕೆ ನಿಷೇಧಿಸಲಾಗಿದೆ. ವಿದ್ಯಾರ್ಥಿಗಳು ಮೊಬೈಲ್, ಸ್ಮಾರ್ಟ್ ವಾಚ್, ಬ್ಲೂಟೂತ್ ಸೇರಿ ಯಾವುದೇ ವಿದ್ಯುನ್ಮಾನ ಉಪಕರಣಗಳನ್ನು ತರಲು ಅವಕಾಶ ಇರುವುದಿಲ್ಲ.

### ವಾಹನಗಳಿಗೆ ಜಿಪಿಎಸ್ ಅಳವಡಿಕೆ

ಪರೀಕ್ಷಾ ಅಕ್ರಮ ತಡೆಗಟ್ಟಲು ಎಲ್ಲಾ ಕೇಂದ್ರಗಳಲ್ಲಿ ಸಿ.ಸಿ.ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ ಕಲ್ಪಿಸಲಾಗಿದೆ. ವೆಬ್ ಕಾಸ್ಟಿಂಗ್ ಮೂಲಕ ಜಿಲ್ಲಾ ಪರೀಕ್ಷಾ ಕೊಠಡಿಗಳ ಚಟುವಟಿಕೆಗಳ ಮೇಲೆ ನಿಗಾ ಇಡಲು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ. ಪ್ರಶ್ನೆ ಪತ್ರಿಕೆಗಳ ಸುರಕ್ಷಿತ ಸಾಗಣೆಗೆ ತ್ರಿಸದಸ್ಯ ಸಮಿತಿ ರಚಿಸಲಾಗಿದ್ದು, ವಾಹನಗಳಿಗೆ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಅಳವಡಿಸಲಾಗಿದೆ.

### ವದಂತಿ ತಡೆಯಲು ಅಗತ್ಯ ಕ್ರಮ

ವಾಟ್ಸ್ ಆ್ಯಪ್, ಟೆಲಿಗ್ರಾವ್, ಇನ್ಸ್ಟಾಗ್ರಾವ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಪ್ರಶ್ನೆ ಪತ್ರಿಕೆ ಹರಿಬಿಡುವವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಅಡಿಯಲ್ಲಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಇಲಾಖೆ ಹೇಳಿದೆ.

ನಗರ ಮತ್ತು ಗ್ರಾಮಾಂತರ ಪರೀಕ್ಷಾ ಕೇಂದ್ರಗಳಿಗೆ ಅಗತ್ಯ ಇರುವ ಮೂಲಸೌಕರ್ಯ ಕಲ್ಪಿಸಿ, ನೋಂದಣಿ ಸಂಖ್ಯೆಗಳನ್ನು ಹಾಕುವುದು ಸೇರಿ ಬಹುತೇಕ ಎಲ್ಲಾ ಕೆಲಸವನ್ನು ಮಂಗಳವಾರವೇ ಶಿಕ್ಷಣ ಇಲಾಖೆ ಅಧಿಕಾರಿಗಳು ಮತ್ತು ಶಿಕ್ಷಕರು ಪೂರ್ಣಗೊಳಿಸಿದರು.

ವಿಕಲಚೇತನ ವಿದ್ಯಾರ್ಥಿಗಳಿಗೆ ಭಾಷಾ ವಿನಾಯಿತಿ, ವಾಚಕರ ಸಹಾಯ, ಹೆಚ್ಚುವರಿ ಒಂದು ಗಂಟೆ ಕಾಲಾವಕಾಶ ಹಾಗೂ ನೆಲ ಮಹಡಿಯಲ್ಲಿ ಆಸನ ವ್ಯವಸ್ಥೆ ಸೇರಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗಿದೆ. ಎಸ್‌ಎಸ್‌ಎಲ್‌ಸಿಯಲ್ಲಿ 225 ಈ ಸೌಲಭ್ಯ ಪಡೆಯಲಿದ್ದಾರೆ. ಪ್ರತಿಯೊಂದು ಕೇಂದ್ರಕ್ಕೂ ಆರೋಗ್ಯ ಇಲಾಖೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ, ಕೆ.ಎಸ್.ಆರ್.ಟಿ.ಸಿ ಮತ್ತು ನಗರ ಸಾರಿಗೆ ಬಸ್‌ಗಳಲ್ಲಿ ಪರೀಕ್ಷಾ ಕೇಂದ್ರಕ್ಕೆ ತೆರಳಲು ಮತ್ತು ಹಿಂತಿರುಗಲು ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಪರೀಕ್ಷಾ ದಿನಗಳಲ್ಲಿ ನಿರಂತರ ವಿದ್ಯುತ್ ಪೂರೈಕೆಗಾಗಿ ಸೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಗಿದೆ.

# ಸಿಲಿಂಡರ್ ಅಭಾವ: ಕಿರು ಉದ್ಯಮ ಸ್ಥಗಿತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಸಿಲಿಂಡರ್ ಕೊರತೆ ಹೆಚ್ಚಿದ್ದು, ನಗರದ ಅಕ್ಷಮಾಲಾ ಸಾಂಪ್ರದಾಯಿಕ ತಿನಿಸು ಪದಾರ್ಥಗಳ ತಯಾರಿಕೆ ಕಾರ್ಖಾನೆ ಉತ್ಪಾದನೆ ಸ್ಥಗಿತಗೊಳಿಸಿದೆ. ಕಳೆದ ನಾಲ್ಕು ದಿನಗಳಿಂದ ವಾಣಿಜ್ಯ ಸಿಲಿಂಡರ್ ಲಭ್ಯವಾಗದ ಹಿನ್ನಲೆಯಲ್ಲಿ ಕಾರ್ಯಚಟುವಟಿಕೆ ನಿಲ್ಲಿಸಲಾಗಿದೆ.

ಈ ಸಂಸ್ಥೆಯು ಹತ್ತಾರು ಬಗೆಯ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ತಯಾರಿಸುತ್ತದೆ. ನಿತ್ಯ ಒಂದು ಸಿಲಿಂಡರ್ ಖರ್ಚಾಗುತ್ತದೆ. ಆದರೆ, ಸಿಲಿಂಡರ್ ಸಮಸ್ಯೆಯಿಂದ ಕೆಲಸ ನಿಲ್ಲಿಸಲಾಗಿದೆ. ಉಗಾದಿ ಮತ್ತು ಮದುವೆ ದಿನಗಳಾದ್ದರಿಂದ ವಿವಿಧ ಪದಾರ್ಥಗಳಿಗೆ ಬೇಡಿಕೆ ಹೆಚ್ಚಿದೆ. ಸರ್ಕಾರ ಗೃಹಬಳಕೆ ಸಿಲಿಂಡರ್‌ಗೆ ನೀಡಿರುವ ಆದ್ಯತೆಯನ್ನು ಸಣ್ಣ ಉದ್ದಿಮೆದಾರರಿಗೂ ನೀಡಬೇಕೆಂದು ಅಕ್ಷಮಾಲಾ ಸಂಸ್ಥೆಯ ಶ್ವೇತಾ ಮಂಜುನಾಥ್ ಆಗ್ರಹಿಸಿದರು.



### ಮಿಡಿ ಸೌತೆಗೆ ಭಾರೀ ಹೊಡೆತ

ಯುದ್ಧ ಸ್ಥಳೀಯ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದ್ದು, ಮಿಡಿ ಸೌತೆ ರಫ್ತಾಗದೆ ಭಾರೀ ನಷ್ಟವುಂಟಾಗಿದೆ. ಜಿಲ್ಲೆಯಲ್ಲಿ ಬೆಳೆದಿರುವ ಮಿಡಿ ಸೌತೆ, ಬೇಬಿ ಕಾರ್ನ್, ಹಸಿರು ಮತ್ತು ಕೆಂಪು ಮೆಣಸಿನ ಕಾಯಿಯಿಂದ ತಯಾರಿಸಿರುವ ಉಪ್ಪಿನಕಾಯಿ ಅರಬ್ಬಿ ಸಮುದ್ರದ ಮೂಲಕ ಕತಾರ್, ಸೌದಿ, ಈಜಿಪ್ಟ್‌ಗೆ ರಫ್ತಾಗಬೇಕಿತ್ತು. ನಗರದ ಬೂವನಹಳ್ಳಿ ಬಳಿ ಇರುವ ಭಾರತಿ ಅಸೋಷಿಯೇಟ್ಸ್ ಸಂಸ್ಥೆಯು ಐವತ್ತಕ್ಕು ಹೆಚ್ಚು ಬಗೆಯ ಉಪ್ಪಿನಕಾಯಿ ತಯಾರಿಸುತ್ತಿದ್ದು, ಯುದ್ಧದಿಂದ ಉತ್ಪನ್ನಗಳು ಹಾಗೆಯೇ ಉಳಿದಿವೆ.

ಪರಿಸ್ಥಿತಿ ಹೀಗೆ ಮುಂದುವರೆದರೆ ಉದ್ಯಮವನ್ನೇ ಸ್ಥಗಿತಗೊಳಿಸಬೇಕಾಗುತ್ತದೆ. ಕಾರ್ಮಿಕರು ಸಂಕಷ್ಟಕ್ಕೆ ಸಿಲುಕುವ ಆತಂಕ ಎದುರಾಗಿದೆ. ಇತರ ಕೈಗಾರಿಕೆಗಳಲ್ಲೂ ಸಂಕಷ್ಟದ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರತದ ಸಂಪರ್ಕ ಮಾರ್ಗ ಹೊರ್ಮುಜ್ ಜಲಸಂಧಿ ಮುಚ್ಚಿದ ಕಾರಣಕ್ಕೆ ಮಧ್ಯ ಪ್ರಾಚ್ಯ ದೇಶಕ್ಕೆ ರಫ್ತು ಸಂಪೂರ್ಣ ಸ್ಥಗಿತಗೊಂಡಿದೆ.

ನಗರದಲ್ಲಿ ತಯಾರಾದ ಉತ್ಪನ್ನಗಳ 4 ಕಂಟೇನರ್‌ಗಳು, ಮಂಗಳೂರಿನ ಬಂದರಿನಿಂದ ವಾಪಾಸ್ಸಾಗಿವೆ. ರಫ್ತು ಕಡಿಮೆಯಾದಂತೆ ಉತ್ಪಾದನೆ ವೆಚ್ಚವೂ ಹೆಚ್ಚಾಗುವ ಆತಂಕ ಎದುರಾಗಿದೆ.

# ಗ್ರಾಮೀಣ ಪ್ರದೇಶಕ್ಕೆ ಮೂಲ ಸೌಕರ್ಯ ತಲುಪಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಯಾವುದೇ ಗ್ರಾಮವೂ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಬಾರದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲೂಕಿನ ಹೆಬ್ಬಸಾಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಾಣದಹೊಳೆ, ಕೃಷ್ಣಾಪುರ ಮತ್ತು ಅಜ್ಜನಕೆರೆ ಗ್ರಾಮಗಳಿಗೆ ಸಾರ್ವಜನಿಕರ ಬಹುಕಾಲದ ಬೇಡಿಕೆಯಂತೆ 85 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ನೂತನ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ರಸ್ತೆ ನಿರ್ಮಾಣದಿಂದ ಗ್ರಾಮಸ್ಥರಿಗೆ ಸಂಚಾರ ಸುಗಮವಾಗುವುದರ ಜೊತೆಗೆ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಸಹ ಅನುಕೂಲವಾಗಲಿದೆ. ಮಳೆಗಾಲದ ವೇಳೆ ರಸ್ತೆ ಸಮಸ್ಯೆಯಿಂದ ಗ್ರಾಮಸ್ಥರು ಎದುರಿಸುತ್ತಿದ್ದ ತೊಂದರೆಗಳಿಗೆ ಈ ಕಾಮಗಾರಿ ಪರಿಹಾರವಾಗಲಿದೆ ಎಂದು ಹೇಳಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿಯಾಗದೆ ವಾಹನ ಸಂಚಾರಕ್ಕೂ ಅಸೌಕರ್ಯವಾಗಿರುವ ರಸ್ತೆಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಅನುದಾನಕ್ಕೆ ಅನುಗುಣವಾಗಿ ಹಂತ ಹಂತವಾಗಿ ಅವುಗಳ ಅಭಿವೃದ್ಧಿಗೆ ಚಾಲನೆ ನೀಡಲಾಗುವುದು. ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರದ ಮೇಲೆ ಒತ್ತಡ ತರಲಾಗಿದ್ದು, ಫಲವಾಗಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಮತ ಕ್ಷೇತ್ರದ ಬಹುತೇಕ ಗ್ರಾಮಗಳಲ್ಲಿ ರಸ್ತೆ ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗುತ್ತಿದೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ರಾಜ್ ಕುಮಾರ್, ಮೇಘರಾಜ್, ನಿಶಾಂತ, ಗುಡ್ಡಪ್ಪ ಶೆಟ್ಟಿ, ಕಾರ್ತಿಕ್ ಇತರರಿದ್ದರು.

# ಅವೈಜ್ಞಾನಿಕ ರಸ್ತೆ ಕಾಮಗಾರಿ ಪ್ರತಿಭಟನೆ ಎಚ್ಚರಿಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪಟ್ಟಣದ ಹೊಸನಗರ ಬಡಾವಣೆಯಲ್ಲಿ ನಡೆಯುತ್ತಿರುವ ರಸ್ತೆಗೆ ಚರಂಡಿ ನಿರ್ಮಿಸದೆ ಕಾಮಗಾರಿ ನಡೆಸುತ್ತಿದ್ದಾರೆ ಎಂದು ನಿವಾಸಿ ಪಿ.ಹೆಚ್.ಸುಲೇಮಾನ್ ದೂರಿದರು.

10-15 ವರ್ಷಗಳಿಂದ ಗುಂಡಿ ಬಿದ್ದಿರುವ ರಸ್ತೆ ಕಾಮಗಾರಿ ಈಗ ಕೈಗೆತ್ತಿಕೊಳ್ಳಲಾಗಿದೆ. ಈಗ ಎರಡನೇ ಬಾರಿ ಕಾಂಕ್ರೀಟ್ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಆದರೆ, ಕಾಮಗಾರಿಯಲ್ಲಿ ತಾಂತ್ರಿಕ ಮಾನದಂಡ ಪಾಲಿಸುತ್ತಿಲ್ಲ. ರಸ್ತೆ ನಿರ್ಮಾಣಕ್ಕೂ ಮೊದಲು ಅಗತ್ಯವಾದ ಬಾಕ್ಸ್ ಚರಂಡಿ ನಿರ್ಮಿಸದೆ ನೇರವಾಗಿ ಕಾಂಕ್ರೀಟ್ ಹಾಕಲಾಗುತ್ತಿದೆ. ಅದರಿಂದ ಮಳೆಗಾಲದಲ್ಲಿ ನೀರು ಸರಿಯಾಗಿ ಹರಿಯದೆ ರಸ್ತೆಯ ಮೇಲೆ ನಿಂತು ಹೊಸದಾಗಿ ಹಾಕಿದ ಕಾಂಕ್ರೀಟ್ ಕೂಡ ಹಾಳಾಗುವ ಪರಿಸ್ಥಿತಿ ಇದೆ ಎಂದರು.

ರಸ್ತೆಗಳಿಗೆ ಸುಸಜ್ಜಿತ ಚರಂಡಿ ಬೇಕು. ಎರಡು ಬದಿಯಲ್ಲೂ ಬಾಕ್ಸ್ ಚರಂಡಿ ಇಲ್ಲದೇ ಮಾಡಿದ ಕಾಮಗಾರಿ ಪರಿಪೂರ್ಣವಾಗುವುದಿಲ್ಲ. ಈ ರೀತಿ ಮಾಡಿದರೆ ಎರಡು ವರ್ಷ ಕೂಡ ರಸ್ತೆ ಬಾಳಿಕೆ ಬರುವುದಿಲ್ಲ. ಪುರಸಭೆ ಇಂಜಿನಿಯರ್ ಮತ್ತು ಮುಖ್ಯಾಧಿಕಾರಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದರು.

ಆರು ಪಾರ್ಕ್‌ಗಳಿದ್ದರೂ ಒಂದನ್ನೂ ಅಭಿವೃದ್ಧಿಪಡಿಸಿಲ್ಲ. ಸಾವಿರಕ್ಕೂ ಹೆಚ್ಚು ಮನೆಗಳಿರುವ ಪ್ರದೇಶದಲ್ಲಿ ಜನರು ದಿನನಿತ್ಯ ಓಡಾಡುವ ದಾರಿಯೇ ದುಸ್ಥಿತಿಯಲ್ಲಿದೆ. ಇನ್ನೂ 30 ವರ್ಷಗಳಿಂದ ಒಂದೇ ಒಂದು ಉದ್ಯಾನವನವೂ ಸಮರ್ಪಕವಾಗಿ ಅಭಿವೃದ್ಧಿಪಡಿಸಿಲ್ಲ. ಜನರ ಜೀವನಮಟ್ಟ ಸುಧಾರಣೆಗೆ ಬೇಕಾದ ಯಾವುದೇ ಕ್ರಮ ಕೈಗೊಂಡಿಲ್ಲ. ಸಮಸ್ಯೆಗೆ ಪರಿಹಾರ ಕಲ್ಪಿಸದಿದ್ದರೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

# ಬಾಗಿಲಿಗೆ ಸಿಲುಕಿ ವಿದ್ಯಾರ್ಥಿಯ ಬೆರಳು ಕಟ್: ಸ್ಥಿತಿ ಗಂಭೀರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ತಾಲೂಕಿನ ಬಾಳ್ಳುಪೇಟೆ ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ನಡೆದ ದುರ್ಘಟನೆಯಲ್ಲಿ ವಿದ್ಯಾರ್ಥಿಯೊಬ್ಬನ ಕೈ ಬೆರಳು ಕಟ್ ಆಗಿ ಗಂಭೀರವಾಗಿ ಗಾಯಗೊಂಡಿದ್ದಾನೆ. ತಾಲ್ಲೂಕಿನ ಮಳಲಿ ಗ್ರಾಮದ ನಿವಾಸಿಯಾಗಿರುವ 6ನೇ ತರಗತಿ ವಿದ್ಯಾರ್ಥಿ ದಿನೇಶ್ ಗಾಯಗೊಂಡ ವಿದ್ಯಾರ್ಥಿ. ಬಾಲಕ ಬಾಳ್ಳುಪೇಟೆಯಲ್ಲಿರುವ ವಿದ್ಯಾರ್ಥಿ ನಿಲಯದಲ್ಲಿ ವಾಸವಿದ್ದು, ಸ್ಥಳೀಯ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಸೋಮವಾರ ತರಗತಿ ನಡೆಯುತ್ತಿದ್ದ ವೇಳೆ ಅಕಸ್ಮಾತ್ ಬಾಗಿಲು ಮುಚ್ಚಿದ ಸಂದರ್ಭದಲ್ಲಿ ದಿನೇಶ್ ಅವರ ಕೈ ಬೆರಳುಗಳು ಬಾಗಿಲಿನ ಸಂದಿಗೆ ಸಿಲುಕಿಕೊಂಡ ಪರಿಣಾಮ ಎರಡು ಬೆರಳುಗಳು ಕಟ್ ಆಗಿವೆ ಎಂದು ತಿಳಿದು ಬಂದಿದೆ. ತಕ್ಷಣವೇ ಶಿಕ್ಷಕರು ಹಾಗೂ ಸಿಬ್ಬಂದಿ ವಿದ್ಯಾರ್ಥಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡುತ್ತಿದ್ದಾರೆ.

ಘಟನೆ ಹಿನ್ನೆಲೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸುರಕ್ಷತಾ ಕ್ರಮಗಳ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವಿಸಿವೆ. ತರಗತಿ ಕೊಠಡಿಗಳಲ್ಲಿ ಸುರಕ್ಷಿತ ಬಾಗಿಲು ವ್ಯವಸ್ಥೆ, ಮಕ್ಕಳ ಮೇಲ್ವಿಚಾರಣೆ ಹಾಗೂ ಮುನ್ನೆಚ್ಚರಿಕಾ ಕ್ರಮಗಳನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂಬ ಒತ್ತಾಯ ವ್ಯಕ್ತವಾಗಿದೆ.

# ಮೀನುಗಾರಿಕೆಗೆ ರಾಸಾಯನಿಕ ಬಳಕೆ ಆರೋಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಹಾನುಬಾಳು ಹೋಬಳಿಯ ಮಾವಿನಹಳ್ಳಿ ಸಮೀಪದ ಹೇಮಾವತಿ ನದಿಯಲ್ಲಿ ಅಪರಿಚಿತರ ತಂಡ ರಾಸಾಯನಿಕ ಬಳಸಿ ಮೀನುಗಾರಿಕೆ ನಡೆಸುತ್ತಿರುವ ಘಟನೆ ಬೆಳಕಿಗೆ ಬಂದಿದೆ.

ನದಿಯಲ್ಲಿ ನೀರಿನ ಮಟ್ಟ ಈಗಾಗಲೇ ಕಡಿಮೆಯಾಗಿರುವ ಪರಿಸ್ಥಿತಿಯಲ್ಲಿ ರಾಸಾಯನಿಕ ಬಳಕೆಯಿಂದ ನೀರು ಕಲುಷಿತವಾಗುತ್ತಿದ್ದು, ಜನರು ಹಾಗೂ ಜಾನುವಾರುಗಳ ಕುಡಿಯುವ ನೀರಿಗೆ ಅಪಾಯ ಉಂಟಾಗಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಅಪರೂಪದ ಆಮೆಗಳನ್ನು ಸಹ ಹಿಡಿದು ಸಾಗಿಸಲಾಗುತ್ತಿದೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಕುರಿತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಗ್ರಾಮಸ್ಥರು ದೂರು ಸಲ್ಲಿಸಿದ್ದರೂ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಆದ್ದರಿಂದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆ ಇಲ್ಲ: ಜಿಲ್ಲಾಧಿಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಗೃಹಬಳಕೆ ಸಿಲಿಂಡರ್ (ಅಡುಗೆ ಅನಿಲ) ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಲಭ್ಯ ಇರುವುದರಿಂದ ಎಲ್‌ಪಿಜಿ ಸಿಲಿಂಡರ್ ಸರಬರಾಜಿನ ಬಗ್ಗೆ ಯಾವುದೇ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಜಿಲ್ಲೆಯ ಎಲ್ಲ ಗೃಹಬಳಕೆ ಅಡುಗೆ ಅನಿಲ ಗ್ಯಾಸ್ ಸಿಲಿಂಡರ್ ಉಪಯೋಗಿಸುವ ಗ್ರಾಹಕರು ಆತಂಕದಲ್ಲಿ ಅನಗತ್ಯ ಬುಕಿಂಗ್ ಮಾಡದಂತೆ ಅವರು ಮನವಿ ಮಾಡಿದ್ದಾರೆ.

ಇ-ಕೆವೈಸಿ ಮಾಡಿರುವ ಗ್ರಾಹಕರು ತಮ್ಮ ರಿಜಿಸ್ಟಾರ್ ಮೊಬೈಲ್ ನಂಬರ್ ಮೂಲಕ ಅನಿಲ್ ಸಿಲಿಂಡರ್ ಬುಕಿಂಗ್‌ನ್ನು ಇಂಡಿಯನ್ ಆಯಿಲ್ ಕಾರ್ಪೋರೇಷನ್ ಸಂಬಂಧಿಸಿದಂತೆ ವಾಟ್ಸಪ್ ನಂಬರ್ 7588888824, ಮಿಸ್ ಕಾಲ್ ನಂ: 8454955555 ಎಸ್‌ಎಂಎಸ್/ಐವಿಆರ್‌ಎಸ್ ಬುಕಿಂಗ್ ನಂ 7718955555 ಅದೇ ರೀತಿ ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್ ಸಂಬಂಧಿಸಿದಂತೆ ವಾಟ್ಸಪ್ ನಂ: 9222201122 ಮಿಸ್ ಕಾಲ್ ನಂ:9493602222 ಎನಿ ಟೈಂ ನಂ: 8888823456 ಮೂಲಕ ಮೇಲಿನ ನಂಬರ್‌ಗಳಿಗೆ ಬುಕಿಂಗ್ ಮಾಡಲು ಅವಕಾಶವಿದೆ.

ಗ್ರಾಹಕರು ಒಮ್ಮೆ ಬುಕ್ ಮಾಡಿದ ನಂತರ 25 ದಿನಗಳ ನಂತರ ಬುಕಿಂಗ್ ಮಾಡಲು ಅವಕಾಶವಿದೆ. (ಉದಾ: ಮಾ.1 ರಂದು ಬುಕಿಂಗ್ ಮಾಡಿದರೆ ಮತ್ತೆ 26ನೇ ತಾರೀಖಿನ ನಂತರ ಮತ್ತೊಮ್ಮೆ ಬುಕ್ ಮಾಡಲು ಅವಕಾಶವಿದೆ). ಗ್ರಾಹಕರ ಗೂಗಲ್ ಫೇ ಸ್ಟೋರ್, ಆಪಲ್ ಸ್ಟೋರ್ ಮೂಲಕವೂ ಹೆಚ್‌ಪಿಸಿಎಲ್, ಬಿಪಿಸಿಎಲ್, ಐಒಸಿಎಲ್ ಆಪ್‌ಗಳ ಮೂಲಕವೂ ಸಹ ಬುಕಿಂಗ್ ಮಾಡಲು ಅವಕಾಶವಿದೆ. ಬುಕಿಂಗ್ ಮಾಡಿರುವ ಅನಿಲ ಗ್ರಾಹಕರಿಗೆ ಓಟಿಪಿ ಮುಖಾಂತರ ಸಿಲಿಂಡರ್ ಸರಬರಾಜು ವ್ಯವಸ್ಥೆ ಇದ್ದು ತಮ್ಮ ಮೊಬೈಲ್ ನಂ.ಗೆ ಬಂದಿರುವ ಒಟಿಪಿ ಅನ್ನು ಡಿಲೆವರಿ ಬಾಯ್‌ಗೆ ತಿಳಿಸಿ ಸಿಲಿಂಡರ್ ಪಡೆಯಲು ತಿಳಿಸಿದ್ದಾರೆ.

ಗ್ರಾಹಕರಿಗೆ ಗೃಹ ಬಳಕೆ ಅನಿಲ್ ಸಿಲಿಂಡರ್ ಕುರಿತು ಯಾವುದೇ ಸಮಸ್ಯೆ ಇದ್ದಲ್ಲಿ ಹತ್ತಿರದ ಗ್ಯಾಸ್ ಏಜೆನ್ಸಿ, ತಾಲೂಕಿನ ತಹಸೀಲ್ದಾರ್ ಕಚೇರಿಯ ಆಹಾರ ಶಾಖೆಯನ್ನು ಹಾಗೂ ಜಿಲ್ಲೆಯ ಜಂಟಿ ನಿರ್ದೇಶಕರ ಕಚೇರಿ, ಆಹಾರ ನಗರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಜಂಟಿ ನಿರ್ದೇಶಕ ಕಚೇರಿ 08172-268229( ಬೆ.10 ರಿಂದ ಸಂಜೆ 5.30 ರವರೆಗೆ) ಆಲೂರು ಆಹಾರ ನಿರೀಕ್ಷಕರು-9845012272, ಅರಕಲಗೂಡು ಆಹಾರ ಶಿರಸ್ತೇದಾರರು-8970353599, ಆಹಾರ ನಿರೀಕ್ಷಕರು-9880292823, ಅರಸೀಕೆರೆ: ಆಹಾರ ನಿರೀಕ್ಷಕರು-9380328907 ಮತ್ತು 9844771286, ಬೇಲೂರು: ಆಹಾರ ನಿರೀಕ್ಷಕರು-8861665723,9483822244, ಚನ್ನರಾಯಪಟ್ಟಣ: ಆಹಾರ ಶಿರಸ್ತೇದಾರ್-9964244343, ಆಹಾರ ನಿರೀಕ್ಷಕರು-6364309328, ಹಾಸನ: ಆಹಾರ ನಿರೀಕ್ಷಕರು-9740290428,9845872348, ಹಾಸನ ನಗರ ಆಹಾರ ನಿರೀಕ್ಷಕರು-9886168827, ಹೊಳೆನರಸೀಪುರ: ಆಹಾರ ಶಿರಸ್ತೇದಾರರು-9008920075, ಆಹಾರ ನಿರೀಕ್ಷಕರು-9902737134 ಮತ್ತು ಸಕಲೇಶಪುರ: ಆಹಾರ ಶಿರಸ್ತೇದಾರರು-9902382986, ಆಹಾರ ನಿರೀಕ್ಷಕರು-9481258935 ಇವರನ್ನು ಸಂಪರ್ಕಿಸಬಹುದು.

ಅನಧಿಕೃತ ಗ್ಯಾಸ್ ಸಿಲಿಂಡರ್ ಅಕ್ರಮ ದಾಸ್ತಾನು, ಸಾಗಾಣಿಕೆ, ರಿಫಿಲ್ಲಿಂಗ್ ಪ್ರಕರಣ ಕಂಡು ಬಂದರೆ ಇಸಿ ಆಕ್ಟ್ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಡಿಸಿ ಅವರು ಎಚ್ಚರಿಕೆ ನೀಡಿದ್ದಾರೆ.

# ಪುನೀತ್ ಜನ್ಮ ದಿನ: ರಕ್ತದಾನ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗುವಿನ ಒಡೆಯ, ಕರ್ನಾಟಕ ರತ್ನ ದಿ. ಪುನೀತ್ ರಾಜಕುಮಾರ್ ಅವರ ಹುಟ್ಟು ಹಬ್ಬದ ಅಂಗವಾಗಿ ನಗರದ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಮಂಗಳವಾರ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಜೀವ ಸಂಜೀವಿನಿ ಬ್ಲಡ್ ಬ್ಯಾಂಕ್ ವತಿಯಿಂದ ಹಮ್ಮಿಕೊಂಡಿದ್ದ ಶಿಬಿರದಲ್ಲಿ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ರಕ್ತದಾನ ಮಾಡಿದರು.

ಸ್ಪೋರ್ಟ್ಸ್ ಅಕಾಡೆಮಿಯ ಎಸ್.ಕೆ.ವೇಣುಗೋಪಾಲ್ ಮಾತನಾಡಿ, ಕನ್ನಡ ಚಿತ್ರ ರಂಗದಲ್ಲಿ ಪುನೀತ್ ರಾಜಕುಮಾರ್ ಅಚ್ಚಳಿಯದ ಛಾಪು ಮೂಡಿಸಿದ್ದಾರೆ. ಅವರು ಬದುಕಿದ ದಿನಗಳು ಕಡಿಮೆಯಾದರೂ ಮಾಡಿದ ಕೆಲಸಗಳು ಅಪಾರ. ಸಮಾಜಕ್ಕೆ ಅತ್ಯುತ್ತಮ ಸಂದೇಶ ಸಾರಿ ಮಾದರಿಯಾಗಿದ್ದಾರೆ. ಅವರ ಸಮಾಜಮುಖಿ ಕೆಲಸಗಳನ್ನ ನಾವೂ ಮುಂದುವರಿಸುವ ಸಲುವಾಗಿ ರಕ್ತದಾನ ಶಿಬಿರ ಏರ್ಪಡಿಸಿದ್ದೇವೆ ಎಂದರು.

ರಕ್ತದಾನ ಇತ್ಯಾದಿ ಸಣ್ಣ ಪುಟ್ಟ ಕೆಲಸ ಕಾರ್ಯಗಳಲ್ಲಿ ನಾವೆಲ್ಲರೂ ತೊಡಗಿಸಿಕೊಳ್ಳುವ ಮೂಲಕ ಅವರು ತೋರಿಸಿಕೊಟ್ಟ ದಾರಿಯಲ್ಲಿ ಮುನ್ನಡೆಯುತ್ತಿದ್ದೇವೆ. ಶಿಬಿರದಲ್ಲಿ ನಮ್ಮ ಅಕಾಡೆಮಿಯ ಸುಮಾರು 50ಕ್ಕೂ ಹೆಚ್ಚು ಮಂದಿ ಕ್ರೀಡಾಪಟುಗಳು ರಕ್ತದಾನ ಮಾಡಿದ್ದಾರೆ ಎಂದರು.

# ಸ್ಕಾಲರ್ಸ್ ಶಾಲೆಯಲ್ಲಿ ತಂಬಾಕು ಮುಕ್ತ ಜಾಗೃತಿ ಅಭಿಯಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಸ್ಕಾಲರ್ಸ್ ಅಂತಾರಾಷ್ಟ್ರೀಯ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ತಂಬಾಕು ಮತ್ತು ಮಾದಕ ದ್ರವ್ಯ ಮುಕ್ತ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಆರೋಗ್ಯ ಇಲಾಖೆಯ ಮಮತಾ ಮಾತನಾಡಿ, ತಂಬಾಕು ಸೇವನೆಯು ಕೇವಲ ವ್ಯಕ್ತಿಯ ಆರೋಗ್ಯ ಹಾಳು ಮಾಡುವುದಲ್ಲದೆ,



ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆಗಳಿಗೆ ದಾರಿಯಾಗುತ್ತದೆ. ವಿದ್ಯಾರ್ಥಿಗಳು ಇಂತಹ ಕೆಟ್ಟ ಅಭ್ಯಾಸಗಳಿಂದ ದೂರವಿರಬೇಕು ಎಂದರು.

# ವಿದ್ಯುತ್ ಕಣ್ಣಾಮುಚ್ಚಾಲೆ ಬೇಲೂರು ಸೆಸ್ಕ್ ಕಚೇರಿಗೆ ಮುತ್ತಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಸೆಸ್ಕ್ ಅಧಿಕಾರಿಗಳ ಕಣ್ಣಾಮುಚ್ಚಾಲೆ ಆಟದಿಂದ ರೈತರಿಗೆ ತೊಂದರೆಯಾಗುತ್ತಿದೆ. ಬೇಸಿಗೆಯಲ್ಲಿ ವಿದ್ಯುತ್ ಇಲ್ಲದೆ ಬೆಳೆಗಳು ಒಣಗುತ್ತಿವೆ ಎಂದು ಆರೋಪಿಸಿ ರೈತ ಸಂಘದ ಕಾರ್ಯಕರ್ತರು ಪಟ್ಟಣದ ಸೆಸ್ಕ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಯಾವುದೇ ಜನಪ್ರತಿನಿಧಿಗಳು ತುಟಿ ಬಿಚ್ಚುತ್ತಿಲ್ಲ. ಬೇಸಿಗೆ ಸಂದರ್ಭದಲ್ಲಿ ರೈತರಿಗೆ ನ್ಯಾಯಯುತ ವಿದ್ಯುತ್ ನೀಡಬೇಕು ಎಂದು ಆಗ್ರಹಿಸಿದರು.

ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಳ್ಳೂರು ಸ್ವಾಮಿಗೌಡ ಮಾತನಾಡಿ, ರಾಜ್ಯ ಸರ್ಕಾರ ರೈತರನ್ನು ಹಿತವನ್ನು ಕಾಯುವ ನಿಟ್ಟಿನಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ವೇದಿಕೆಯ ಮೇಲೆ ಗಂಟೆಗಟ್ಟಲೆ ಭಾಷಣ ಮಾಡುತ್ತಾರೆ. ಆದರೆ ತೆರೆಮರೆಯಲ್ಲಿ



ರೈತರಿಗೆ ಕಿರುಕುಳ ನೀಡುತ್ತಾ ಕೃಷಿಕರ ಬದುಕಿನಲ್ಲಿ ಚೆಲ್ಲಾಟ ಆಡುತ್ತಿದ್ದಾರೆ. ಈಗಾಗಲೇ ಸರ್ಕಾರ ಮಲೆನಾಡು, ಅರೆಮಲೆನಾಡು ಮತ್ತು ಬಯಲು ಸೀಮೆಗೆ ವೈಜ್ಞಾನಿಕವಾಗಿ ಕರೆಂಟ್ ನೀಡುವ ಬಗ್ಗೆ ಇಲಾಖೆಯೇ ನೀತಿ ರೂಪಿಸಿದೆ. ಆದರೆ ಪ್ರತಿನಿತ್ಯ ಬೇಕಾಬಿಟ್ಟಿ ಕರೆಂಟ್ ಕಟ್ ಮಾಡುತ್ತಾರೆ. ಕೇಳಿದರೆ ಲೈನ್ ಕಟ್ ಅಥಾವ ಇನ್ನಿತರ ಕಾರಣದ ಜೊತೆಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಉಡಾಪೆಯಿಂದ ವರ್ತಿಸುತ್ತಾರೆ. ಚೆಸ್ಕಾಂ ಅರೆ-ಬರೆ ವಿದ್ಯುತ್ ನಿಂದ ಕೃಷಿಕರು ರಾತ್ರಿ ವೇಳೆ ವಿಷಜಂತು ಮತ್ತು ಕಾಡಾನೆ ಪ್ರಾಣಿಗಳ ಭಯದಿಂದ ಹೊಲ-ಗದ್ದೆಗೆ ನೀರು ಬಿಡಲು ಹೋಗಬೇಕಾದ ಹೀನಸ್ಥಿತಿ ನಿರ್ಮಾಣವಾಗಿದೆ ಎಂದರು.

ಸರ್ಕಾರ ಪ್ರತಿ ತಿಂಗಳು ನಮ್ಮ ತೆರಿಗೆಯಲ್ಲಿ ಸಂಬಳ ನೀಡುತ್ತದೆ. ಅಧಿಕಾರಿಗಳು ಮಾತ್ರ ಕೆಲಸ ಮಾಡಲು ಸಬೂಬು ಹೇಳುತ್ತಿದ್ದಾರೆ. ನಮಗೆ ನ್ಯಾಯಯುತ ವಿದ್ಯುತ್ ನೀಡಬೇಕು ಇಲ್ಲವಾದರೆ ರಾಜ್ಯ ರೈತ ಸಂಘ ಪ್ರತಿನಿತ್ಯ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ತಾಲೂಕು ರೈತ ಸಂಘದ ಅಧ್ಯಕ್ಷ ಬೋಗಮಲ್ಲೇಶ್ ಮಾತನಾಡಿ, ಬೇಸಿಗೆ ಸಂದರ್ಭದಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ರೈತರ ಗೋಳು ನಿಜಕ್ಕೂ ಹೀನಾಯವಾಗಿದೆ. ನಿರಂತರ ಜ್ಯೋತಿಯನ್ನು ದಿನಪೂರ್ತಿ ನೀಡುವ ಭರವಸೆ ನೀಡಿದ ಸರ್ಕಾರ ತಮಗೆ ಇಷ್ಟ ಬಂದ ರೀತಿಯಲ್ಲಿ ಕರೆಂಟ್ ನೀಡುತ್ತಿದ್ದಾರೆ. ರಿಪೇರಿಗೆ ಬಂದ ಟಿಸಿಗಳನ್ನು ಸರ್ಕಾರದ ವೆಚ್ಚದಲ್ಲಿ ರಿಪೇರಿ ಮಾಡಿಕೊಟ್ಟು ಎರಡು ದಿನದಲ್ಲಿ ನೀಡಬೇಕು ಎಂಬ ನೀತಿಯನ್ನು ಉಲ್ಲಂಘಿಸಿದ ಅಧಿಕಾರಿಗಳು ಟಿಸಿ ರಿಪೇರಿಗೆ ರೈತರಿಂದ ಹಣ ಪಡೆದು ತಿಂಗಳಗಟ್ಟಲೆ ಕಾಯುವ ಸ್ಥಿತಿಗೆ ಕಾರಣವಾಗಿದ್ದಾರೆ. ರೈತರ ಹೆಸರು ಹೇಳಿಕೊಂಡು ಅಧಿಕಾರ ಗದ್ದುಗೆ ಹಿಡಿದ ಬಳಿಕ ಸರ್ಕಾರ ಮತ್ತು ಜನಪ್ರತಿನಿಧಿಗಳು ಕೃಷಿಕರ ಮೇಲೆ ಸವಾರಿ ಮಾಡುತ್ತಾ ಶೋಷಣೆಗೆ ಮುಂದಾಗಿದ್ದಾರೆ. ರೈತರು ಯಾವ ಕಾರಣಕ್ಕೂ ಸುಮ್ಮನಿರುವುದಿಲ್ಲ ನ್ಯಾಯ ಸಿಗುವ ತನಕ ಹೋರಾಟ ಅಚಲವೆಂದರು.

ತಾಲ್ಲೂಕು ರೈತ ಸಂಘದ ಪದಾಧಿಕಾರಿಗಳಾದ ಬಸವರಾಜು, ಬಿರಟೆಮನೆ ಸುರೇಶ, ರಂಗನಾಥ್, ಸಿದ್ದೇಗೌಡ, ಮಲ್ಲಿಕಾರ್ಜುನ್, ಪ್ರಸನ್, ಜೆ.ಕೆ.ಸುಮಾ, ತೀರ್ಥಕುಮಾರ್, ವಿಜಯಕುಮಾರ್, ಮಹೇಶ್ ಇತರರಿದ್ದರು.

# ಇಂದಿನಿಂದ ಎಸ್ಎಸ್ಎಲ್‌ಸಿ ಪರೀಕ್ಷೆ: ಅಗತ್ಯ ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪು: ಈ ಬಾರಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಫಲಿತಾಂಶದ ನಿರೀಕ್ಷೆ ಇದ್ದು, ಪೂರಕ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳನ್ನು ಸಿದ್ಧತೆ ಮಾಡಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗೇಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾ. 18 ರಿಂದ ಏ. 2ರ ವರೆಗೆ ಪರೀಕ್ಷೆ ನಡೆಯಲಿದೆ.

ಪಟ್ಟಣದಲ್ಲಿ 3, ಗ್ರಾಮೀಣ ಭಾಗದ ಶಾಲೆಗಳು 6 ಸೇರಿ ತಾಲೂಕಿನ ಒಟ್ಟು 9 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ಈ ಬಾರಿ ಬಾಲಕರು 1096, ಬಾಲಕಿಯರು 1117 ಸೇರಿ 2213 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಆರೋಗ್ಯ ಪರೀಕ್ಷಕರು, ಪೊಲೀಸ್ ಬಿಗಿ ಬಂದೋಬಸ್ತ್, ತಹಸೀಲ್ದಾರ್ ನೇತೃತ್ವದಲ್ಲಿ ಪರೀಕ್ಷೆ ನಡೆಸಲಾಗುವುದು ಎಂದರು.



ಫಲಿತಾಂಶ ಸುಧಾರಣೆಗಾಗಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಫ್ರೆಂಡ್ಲಿ ಫ್ರೈಡೆ ಕಾರ್ಯಕ್ರಮದೊಂದಿಗೆ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಆತ್ಮಸ್ಥೈರ್ಯ ತುಂಬುವ ಕಾರ್ಯಕ್ರಮ ನಡೆಸಿದ್ದಾರೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಆಯಾ ಪರೀಕ್ಷಾ ಕೇಂದ್ರಗಳಲ್ಲಿ ಪರ್ಯಾಯ ಬೋಧನೆ ನಡೆಸಲಾಗಿದೆ. 180 ವಿದ್ಯಾರ್ಥಿಗಳಿಗೆ ಪ್ರೇರಣಾ ಕಾರ್ಯಕ್ರಮದ ಮೂಲಕ ಅಂಕ ಹೆಚ್ಚಳಕ್ಕೆ ಕಾರ್ಯಾಗಾರ ನಡೆಸಲಾಗಿದೆ. ಪಟ್ಟಣದ ಬಾಲಕರ ಮತ್ತು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಪಾರ್ಕ್ ಪಕ್ಕದ ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಗ್ರಾಮೀಣ ಭಾಗದ ಹಳ್ಳಿಮೈಸೂರು, ಹರಿಹರಪುರ, ಪಡುವಲಹಿಪ್ಪೆ, ತಟ್ಟೆಕೆರೆ ಗ್ರಾಮದ ಆದರ್ಶ, ದೊಡ್ಡಕಾಡನೂರಿನ ಜೆಎಸ್ಎಸ್ ಮತ್ತು ಸೋಮನಹಳ್ಳಿ ಸರಕರಿ ಪದವಿಪೂರ್ವ ಕಾಲೇಜುಗಳು ಪರೀಕ್ಷಾ ಕೇಂದ್ರಗಳು ಎಂದರು.

ವಿದ್ಯಾರ್ಥಿಗಳಿಗೆ ಇಲಾಖೆ ನಿಯಮಾವಳಿ ಅನುಸರಿಸಿ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಇಟ್ಟುಕೊಂಡು ಉತ್ತರಿಸುವ ಮತ್ತು ಮೌಲ್ಯಮಾಪನಗೊಳಿಸಿ ಸೂಕ್ತ ಬೋಧನೆ ನಡೆಸುವ ಕೆಲಸ ಮಾಡಲಾಗಿದೆ. ಪರೀಕ್ಷಾ ಪೂರ್ವಭಾವಿ ಪರೀಕ್ಷೆ 3 ಬಾರಿ ನಡೆಸಲಾಗಿದೆ. ಪೂರ್ವಭಾವಿ ಪರೀಕ್ಷೆಗೆ 30 ನಿಮಷ ಮುನ್ನ ಮಾತ್ರವೇ ಪ್ರಶ್ನೆ ಪತ್ರಿಕೆ ತೆರೆದು ಕೊಡುವ ಇಲಾಖೆ ನಿಯಮದಂತೆ ಪರೀಕ್ಷೆ ನಡೆಸಲಾಗಿದೆ. ಇದರಲ್ಲಿ ತಾಲೂಕಿಗೆ ಶೇ. 91 ರಷ್ಟು ಫಲಿತಾಂಶ ದಾಖಲಾಗಿದೆ. ಕಳೆದ ಬಾರಿ ಮುಖ್ಯ ಪರೀಕ್ಷೆಯಲ್ಲಿ ಶೇ. 75.52 ಫಲಿತಾಂಶ ದೊರತಿತ್ತು. ಈ ಬಾರಿ ಹೆಚ್ಚಿನ ಫಲಿತಾಂಶದ ನಿರೀಕ್ಷೆ ಇದೆ ಎಂದರು.

# ಮಕ್ಕಳಿಗೆ ಸಮಾಜದ ಇತಿಹಾಸ ತಿಳಿಸುವ ಕೆಲಸವಾಗಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ದೇಶದ ಪ್ರತಿಯೊಂದು ಜಾತಿ ಆಧಾರಿತ ಸಮುದಾಯಕ್ಕೆ ತನ್ನದೇ ಆದ ಸಂಸ್ಕಾರ, ಸಂಸ್ಕೃತಿ ಹಾಗು ಪರಂಪರೆ ಇದ್ದು ಅದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಹೋರಾಟ ಮಾಡಬೇಕಾಗಿದೆಯೆಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಹೇಳಿದರು.

ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿಯ ಗುಜ್ಜನಹಳ್ಳಿ ಗ್ರಾಮದ ಸಮುದಾಯ ಭವನದಲ್ಲಿ ರಾಣಿಯರ್ ಸಮಾಜ ಸೇವಾ ಸಂಘದಿಂದ ಆಯೋಜಿಸಿದ್ದ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಹಿರಿಯರು ತಮ್ಮ ಮಕ್ಕಳಿಗೆ ಸಮಾಜ ಹುಟ್ಟಿದ ಇತಿಹಾಸ ಹೇಳಿಕೊಡಬೇಕು. ಆರ್ಥಿಕ ಸ್ಥಿತಿ ಹದಗೆಟ್ಟಿದ್ದರೂ ಸಹ ಸ್ವಾಭಿಮಾನದ ಬದುಕು ಸಾಗಿಸಿ, ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡುವುದರ ಮೂಲಕ ಸ್ವಯಂ ಏಳಿಗೆ ಹೊಂದಲು ಬದ್ಧರಾಗಬೇಕು ಎಂದರು.

ರಾಣಿಯರ್ ಸಮಾಜದ ಜಿಲ್ಲಾಧ್ಯಕ್ಷ ಮೊನಪ್ಪ ಹೆಗ್ಗದ್ದೆ ಮಾತನಾಡಿ, ಜಿಲ್ಲೆಯ ರಾಣಿಯರ್ ಸಮಾಜದ ಸಂಘವು ನಾನಾ ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದೆ. ನಮ್ಮ ಸಮಾಜವು ಸಾಮಾಜಿಕ ಕೇತ್ರಕ್ಕೆ ತನ್ನದೇಯಾದ ಕೊಡುಗೆಗಳನ್ನು ನೀಡುತ್ತಿದೆ. ಈ ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ಹಾಗೂ ಶಿಕ್ಷಕರನ್ನು ಗುರುತಿಸಿ ಸನ್ಮಾನ ಮಾಡಲಾಗಿದೆ. ಸಮಾಜದ ಮೇಲಾಗುವ ದೌರ್ಜನ್ಯವನ್ನು ಖಂಡಿಸಿ ಸಾಂವಿಧಾನಿಕವಾಗಿ ನ್ಯಾಯ ಪಡೆದುಕೊಳ್ಳಲು ನಾವೆಲ್ಲರೂ ಒಂದಾಗಬೇಕಿದೆ ಎಂದರು.

ಶಾಸಕ ಹೆಚ್.ಕೆ. ಸುರೇಶ್, ಅಖಿಲ ಕರ್ನಾಟಕ ರಾಣಿಯರ್ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷ ತನಿಯಪ್ಪ ರಾಣಿಯರ್, ಮಾಜಿ ಅಧ್ಯಕ್ಷ ಜಯಾರಣ್ಯ, ಗೌರವಾಧ್ಯಕ್ಷ ಎಂ.ಡಿ. ಪ್ರಕಾಶ್, ವಲಯ ಸಮಿತಿ ಅಧ್ಯಕ್ಷ ಕೆ.ಮಹಾಬಲ, ಚಿಕ್ಕಮಗಳೂರು ಜಿಲ್ಲಾಧ್ಯಕ್ಷ ಎಂ.ಸತೀಶ್, ಜಿಲ್ಲಾ ಉಪಾಧ್ಯಕ್ಷ ಕೇಶವ, ಪ್ರಧಾನ ಕಾರ್ಯದರ್ಶಿ ಶಿವಣ್ಣ ಗುಜ್ಜನಹಳ್ಳಿ, ಸತೀಶ್ ಸುರತ್ಕಲ್, ಅಮಿತ್ ಶೆಟ್ಟಿ, ಶೇಖರ್, ಧನಂಜಯ್ ಅರಸ್ ಇತರರಿದ್ದರು.

# ಮಾ. 22 ರಿಂದ ಚನ್ನರಾಯಪಟ್ಟಣದಲ್ಲಿ ಆನಂದದ ಅನುಭೂತಿ ಶಿಬಿರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಮತ್ತು ತಾಲ್ಲೂಕು ಲಯನ್ಸ್ ಕ್ಲಬ್ ವತಿಯಿಂದ ಮಾ. 22 ರಿಂದ 28ರ ವರೆಗೆ ಟಿಆನಂದದ ಅನುಭೂತಿಟಿ ಶಿಬಿರ ಆಯೋಜಿಸಲಾಗಿದೆ ಎಂದು ಆಯೋಜಕ ರಮೇಶ್ ಜಾಲಿಹಾಳ್ ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಈ ಶಿಬಿರವು ಯೋಗ, ಪ್ರಾಣಾಯಾಮ, ಧ್ಯಾನ ಹಾಗು ಸುದರ್ಶನ ಕ್ರಿಯೆ ಆಧಾರಿತ ವಿನೂತನ ಕಾರ್ಯಕ್ರಮ. ದಿನಕ್ಕೆ ಮೂರು ಬ್ಯಾಚ್ ಹಮ್ಮಿಕೊಳ್ಳಲಾಗಿದೆ. ಮೊದಲ ಬ್ಯಾಚ್ ಬೆಳಿಗ್ಗೆ 6 ರಿಂದ 8.30, 2ನೇ ಬ್ಯಾಚ್ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30, ಮೂರನೇ ಬ್ಯಾಚ್ ಸಂಜೆ 6 ರಿಂದ 8.30ರ ವರೆಗೆ ನಡೆಯಲಿದೆಯೆಂದರು. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಈ ಕಾರ್ಯಕ್ರಮವು ಈಗಾಗಲೇ 190 ದೇಶಗಳಲ್ಲಿ ಕೋಟ್ಯಾಂತರ ಜನರಿಗೆ ಒತ್ತಡಮುಕ್ತ ಮನಸ್ಸು ಮತ್ತು ಆರೋಗ್ಯ ಸುಧಾರಣೆಗೆ ನೆರವಾಗಿದೆ ಎಂದರು.

18 ವರ್ಷ ಮೇಲ್ಪಟ್ಟ ಎಲ್ಲರಿಗೂ ಮುಕ್ತ ಅವಕಾಶ, ಜ್ಞಾನ ಮತ್ತು ಮನಸ್ಸಿನ ಸ್ಥಿತಿಯ ಬಗ್ಗೆ ಪರಿಚಯ, ಒತ್ತಡ ನಿಬಾಯಿಸಲು ಪ್ರಾಯೋಗಿಕ ತಂತ್ರಜ್ಞಾನ, ಆರೋಗ್ಯ ಕಾರ್ಯಕ್ಷಮತೆ ಹಾಗು ಸಾಮರ್ಥ್ಯ ಹೆಚ್ಚಿಸುವುದು, ವಿಶೇಷ ಕ್ರಿಯೆ ಕಲಿಯಲು ಉಲ್ಲಾಸಭರಿತ ಶಿಬಿರವಾಗಿದೆ. ಮಾಹಿತಿಗೆ ಮೊ.ನಂ. 8197637800, 9482419671 ಇಲ್ಲಿಗೆ ಸಂಪರ್ಕಿಸಬಹುದೆಂದರು.

ಜಿಲ್ಲಾ ಅಭಿವೃದ್ಧಿ ಸಮಿತಿ ಸದಸ್ಯ ಸಿ.ಆರ್.ಪರಮೇಶ್ ಮಾತನಾಡಿ, ಕ್ರಿಯೆ ಅಭ್ಯಾಸದ ನಂತರ ತಮ್ಮ ಆರೋಗ್ಯದಲ್ಲಿ ಕಂಡುಬಂದ ಸಕಾರಾತ್ಮಕ ಬದಲಾವಣೆಗಳನ್ನು ವಿವರಿಸಿದರು.

ಆರ್ಟ್ ಆಫ್ ಲಿವಿಂಗ್ ಶಿಕ್ಷಣ ಸಮಿತಿ ಹಿರಿಯ ಶಿಕ್ಷಕಿ ಗೀತಾ ಜಲಾಲ್, ಸುದರ್ಶನ ಕ್ರಿಯೆಯಿಂದ ಜೀವನದಲ್ಲಿ ಉಂಟಾದ ಶಾಂತಿ ಹಾಗೂ ಸಮತೋಲನದ ಬಗ್ಗೆ ಮಾತನಾಡಿದರು.

ಸುದ್ದಿಗೋಷ್ಟಿಯಲ್ಲಿ ಆರ್ಟ್ ಆಫ್ ಲಿವಿಂಗ್ ಸದಸ್ಯೆ ನಿರ್ಮಲ, ಲಯನ್ಸ್ ಸೇವಾ ಸಂಸ್ಥೆ ಅಧ್ಯಕ್ಷ ಲಯನ್ ಗಿರೀಶ್, ಕಾರ್ಯದರ್ಶಿ ಗೋವಿಂದರಾಜು, ಆರ್‌ಎಸ್‌ಎಸ್ ಮುಖ್ಯಸ್ಥ ಗಜಾನನ, ಮನೋಹರ್ ಇದ್ದರು.

# ಭಯ ಬಿಟ್ಟು ಪರೀಕ್ಷೆಗೆ ಹಾಜರಾಗಿ: ಸಲಹೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುವ ಮಕ್ಕಳು ಆರೋಗ್ಯ ಕಾಳಜಿ ವಹಿಸಬೇಕು. ಭಯ ಇಲ್ಲದೆ ಪರೀಕ್ಷೆಗೆ ಹಾಜರಾಗಬೇಕು ಎಂದು ಜಿಲ್ಲಾ ಕೆಡಿಪಿ ಸದಸ್ಯೆ ಸೌಮ್ಯ ಆನಂದ್ ಸಲಹೆ ನೀಡಿದರು.

ಹಳೇಬೀಡಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಲೇಖನ ಸಾಮಾಗ್ರಿ ವಿತರಿಸಿ ಅವರು ಮಾತನಾಡಿದರು.

ಎಸ್ಎಸ್ಎಲ್‌ಸಿ ಪರೀಕ್ಷೆ ಎಂದರೆ ಕಬ್ಬಿಣದ ಕಡಲೆಯಲ್ಲ. ಸಮಾಧಾನ ಚಿತ್ತದಿಂದ ಪರೀಕ್ಷೆ ಎದುರಿಸಿದವರು, ಈಗ ಮಾತ್ರವಲ್ಲ, ಉನ್ನತ ಶಿಕ್ಷಣದಲ್ಲಿಯೂ ಯಶಸ್ವಿಯಾಗಬಹುದು. ಪರೀಕ್ಷೆ ಸಮಯದಲ್ಲಿ ಜಂಕ್ ಫುಡ್ ನಿಂದು ದೂರವಿದ್ದು, ಉತ್ತಮ ಆಹಾರ ಸೇವಿಸಬೇಕು. ಆತಂಕ ಇಲ್ಲದೆ ಪರೀಕ್ಷೆ ಕೊಠಡಿಗೆ ಹೋಗಬೇಕು ಎಂದು ಸೌಮ್ಯ ಆನಂದ್ ಸಲಹೆ ಮಾಡಿದರು.

ಮುಖ್ಯಶಿಕ್ಷಕ ಮೋಹನರಾಜು ಮಾತನಾಡಿ, ಸರ್ಕಾರಿ ಶಾಲೆ ಮಕ್ಕಳಿಗೆ ಹಿತ ಬಯಸಲು ಲೆಕ್ಕವಿಲ್ಲದಷ್ಟು ಮಂದಿ ಇರುತ್ತಾರೆ. ಅದರೊಳಗೆ ಜಿಲ್ಲಾ ಕೆಡಿಪಿ ಸದಸ್ಯೆ ಸೌಮ್ಯ ಆನಂದ್ ಸಹ ಒಬ್ಬರಾಗಿದ್ದಾರೆ ಎಂದರು.

ಶಿಕ್ಷಕರಾದ ಮಮತಾ ಪ್ರಭು, ಕಲಾವತಿ, ಪ್ರಸನ್ನ ಕುಮಾರ್ ಇದ್ದರು.

# ಕಬ್ಬಿನಂತೆ ಕೋಳಿ ಸಾಕಣೆದಾರರಿಗೆ ಬೆಂಬಲ ಬೆಲೆ ಕೊಡಿ




**-ಚಂದ್ರಶೇಖರ್,**
**ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ**

ಸರ್ಕಾರ ಕಂಪನಿ ಮತ್ತು ಕೋಳಿ ಸಾಕಾಣಿಕೆ ರೈತರ ನಡುವೆ ಸಮಿತಿ ರಚಿಸಿದ್ದು, ಹತ್ತು ರೈತರನ್ನು ಸೇರ್ಪಡೆ ಮಾಡಿ ಶೀಘ್ರವೇ ಸಭೆ ನಡೆಸಬೇಕಿದೆ.

ರಾಜ್ಯದಲ್ಲಿ 50 ಸಾವಿರ ಕೋಳಿ ಸಾಕಾಣಿಕೆ ರೈತರು ಸಂಕಷ್ಟದಲ್ಲಿದ್ದು ಸಮಿತಿ ವರದಿ ಬರುವರೆಗೂ ತಾತ್ಕಾಲಿಕವಾಗಿ ದರ ನಿಗದಿಪಡಿಸಬೇಕು. ಶೇ. 90ರಷ್ಟು ರೈತರು ಒಪ್ಪಂದ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿದ್ದು ಶೆಡ್ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದು ಕೋಳಿ ಸಾಕಾಣಿಕೆ ಮಾಡುತ್ತಾ ಆರ್ಥಿಕ ವೆಚ್ಚವನ್ನು ಸರಿದೂಗಿಸಿಕೊಂಡು ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ. ಖಾಸಗಿ ಕಂಪನಿಯವರು ಸರಿಯಾದ ರೀತಿಯಲ್ಲಿ ರೈತರಿಗೆ ಗ್ರೋಯಿಂಗ್ ಚಾರ್ಜ್ ನೀಡುತ್ತಿಲ್ಲ. ಇದರಿಂದ ರಾಜ್ಯದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗುತ್ತಿದೆ.

ಕಳೆದ ಐದು ವರ್ಷಗಳ ಹಿಂದೆ ರೈತರ ಸಂಕಷ್ಟಗಳ ಬಗ್ಗೆ ಸ್ಪಂದಿಸದ ಕಾರಣ ಪಶುಭವನದ ಆವರಣದಲ್ಲಿ ಸಂಘ ಉಗ್ರ ಹೋರಾಟ ನಡೆಸಿದ್ದು ರಾಜ್ಯದ್ಯಂತ ರೈತರು ಬೀದಿಗೆ ಹಿಡಿದು ಹೋರಾಟ ಮಾಡಿದ ಪರಿಣಾಮ ಕೆಜಿಗೆ ಆರು ರೂಪಾಯಿ 20 ಪೈಸೆ ನಿಗದಿಯಾಗಿತ್ತು. ಪ್ರತಿವರ್ಷ ಐವತ್ತು ಪೈಸೆ ಹೆಚ್ಚಳ ಮಾಡುವಂತೆ ತೀರ್ಮಾನ ತೀರ್ಮಾನವಾಗಿತ್ತು. ಅದು ಜಾರಿಯಾಗಲಿಲ್ಲ. ಕೋಳಿ ಸಾಕಾಣಿಕೆ ವೆಚ್ಚ ದುಬಾರಿಯಾಗಿದ್ದು ರೈತರಿಗೆ ಲಾಭದಾಯಕವಾಗದೆ ನಷ್ಟವನ್ನು ಅನುಭವಿಸುತ್ತಿದ್ದು ಗ್ರೋಯಿಂಗ್ ಚಾರ್ಜನ್ನು 20 ರೂ. ನಿಗದಿ ಪಡಿಸುವಂತೆ ನಮ್ಮ ಬೇಡಿಕೆಯಾಗಿದೆ.

ರೈತರದ ನಾವು ವ್ಯವಸಾಯದ ಉಪಕಸ್ಬಾಗಿ ಕೋಳಿ ಸಾಕಾಣಿಕೆ ಉದ್ಯಮದಲ್ಲಿ ತೊಡಗಿಸಿಕೊಂಡು ದೇಶಕ್ಕೆ ಆಹಾರ ಭದ್ರತೆ ಒದಗಿಸುತ್ತಿರುವುದು ಸರಿ ಅಷ್ಟೇ ಆದರೆ ರಾಷ್ಟ್ರೀಯ ಕಂಪನಿಗಳು ರೈತರ ಹೆಸರಿನಲ್ಲಿ ಕರ್ನಾಟಕ ಪೌಲ್ಟ್ರಿ ಫಾರ್ಮರ್ಸ್



ಅಂಡ್ ಬ್ರೀಡರ್ಸ್ ಅಸೋಸಿಯೇಷನ್ ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿ ಕೊಂಡು ರೈತರ ಹೆಸರಿನಲ್ಲಿ ಸರ್ಕಾರಕ್ಕೆ ತಪ್ಪು ಮಾಹಿತಿ ಕೊಟ್ಟು ಸದರಿ ಕಂಪನಿಗಳು ಉತ್ಪಾದಿಸುತ್ತಿರುವ ಹೈಬ್ರಿಡ್ ಕೋಳಿ ಮರಿಗಳ ದರವನ್ನು ನಾಲ್ಕು ಪಟ್ಟು ಬೆಲೆ ಎಂದರೆ ಒಂದು ಕೋಳಿ ಮರಿಗೆ ಅರುವತ್ತು ರೂಪಾಯಿ 60 ರೂ ಬೆಲೆ ನಿಗದಿಪಡಿಸಿ ರೈತರಿಗೆ ಮಾರಾಟ ಮಾಡುವ ಮೂಲಕ ಹಾಗೂ ಕಂಪನಿಯವರೇ ಮಾಂಸದ ಕೋಳಿ ದರ ಮನಸೋ ಇಚ್ಛೆ ದರ ನಿಗದಿಪಡಿಸಿ ಪೋಷಣೆ ಮಾಡುತ್ತಿದ್ದಾರೆ.

ಕೋಳಿ ಸಾಕಾಣಿಕೆ ಮಾಡುತ್ತಿರುವ ರೈತರನ್ನು ನಷ್ಟಕ್ಕೆ ಸಿಲುಕಿಸಿ ಉದ್ಯಮದಿಂದ ವಕ್ಕಲಬ್ಬಿಸುವ ಹುನ್ನಾರ ವನ್ನು ಕಂಪನಿಗಳು ರೂಪಿಸುತ್ತೇವೆ ಈ ಕಂಪನಿಗಳು ಸ್ವತಂತ್ರವಾಗಿದ್ದು ಯಾವುದೇ ಇಲಾಖೆಯ ಅಧೀನದಲ್ಲಿ ಇರುವುದಿಲ್ಲ ಅವರು ಮಾಡುವ ಕಾನೂನು ನಿರ್ಧಾರಗಳಿಂದ ರಾಜ್ಯದ ರೈತರಿಗೆ ಶೋಷಣೆ ಆಗುತ್ತಿದೆ ಸ್ವಂತ ಕೋಳಿ ಸಾಕಾಣಿಕೆ ಮಾಡಲಾಗದೆ ಹಾಗೂ ಕಂಪನಿ ಜೊತೆ ಒಪ್ಪಂದ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿದ್ದರು ರೈತರಿಗೆ ನಷ್ಟವಾಗುತ್ತಿದೆ. ಕೋಳಿ ಸಾಕಾಣಿಕೆ ರೈತರು ಮತ್ತು ಖಾಸಗಿ ಕಂಪನಿಗಳ ಜೊತೆ ಸರ್ಕಾರ ಕೈ ಜೋಡಿಸಿ ಬೆಲೆ ನಿಯಂತ್ರಣ. ಗುಣಮಟ್ಟದ ಕೋಳಿ ಮರಿ. ಔಷಧಿ ಇವುಗಳ ಬಗ್ಗೆ ನಿಯಂತ್ರಣ ಸಾಧಿಸಲು ಸರ್ಕಾರ ಮಧ್ಯಸ್ಥಿಕೆ ವಹಿಸಿ ಕುಕ್ಕುಟ ನಿಯಂತ್ರಣ ಕಾಯ್ದೆ ಜಾರಿಗೆ ತರಬೇಕು. ಈಗಾಗಲೇ ಕೋಳಿ ಸಾಕಾಣಿಕೆಯನ್ನು ಕೃಷಿ ಚಟುವಟಿಕೆ ಎಂದು ವ್ಯಾಖ್ಯಾನಿಸಿದರು ಕೃಷಿಗೆ ಲಭ್ಯ ಇರುವ ಎಲ್ಲಾ ಸೌಲಭ್ಯಗಳನ್ನು ಕೋಳಿ ಸಾಕಾಣಿಕೆ ಚಟುವಟಿಕೆಗೆ ವಿಸ್ತರಿಸಲು ಹಾಗೂ ಶೇ. 4ರ ಬಡ್ಡಿ ದರದಲ್ಲಿ 25 ಲಕ್ಷ ರೂ. ಸಾಲ ಸೌಲಭ್ಯ ಜಾರಿಯಾಗಬೇಕು. ಕೆಎಂಎಫ್ ಮಾದರಿಯಲ್ಲಿ ಸರ್ಕಾರದಿಂದ ಕೋಳಿ ಸಾಕಾಣಿಕೆ ರೈತರಿಗೆ ಸಹಾಯಧನ ನೀಡಬೇಕು. ರಾಜ್ಯದಲ್ಲಿ ಕಬ್ಬು ಬೆಳೆಗಾರರಿಗೆ ಬೆಲೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗದಿ ಪಡಿಸಿದಂತೆ ನಮ್ಮ ಕೋಳಿ ಬೆಳಗಾರರಿಗೂ ಬೆಲೆ ನಿಗದಿ ಪಡಿಸಬೇಕು. ರಾಜ್ಯದ ಕೋಳಿ ಬೆಳಗಾರರು ನಷ್ಟದ ಸುಳಿಯಲ್ಲಿ ಸಿಲುಕಿ ಮ ನಲಗುತ್ತಿದ್ದಾರೆ. ಸಾಮಾನ್ಯ ರೈತರು ಮಾರುಕಟ್ಟೆಯಲ್ಲಿ ಸ್ಥಾಪನೆ ಮಾಡಲು ಅವಕಾಶ ಸೃಷ್ಟಿಸುವ ಸಲುವಾಗಿ ಹಾಗೂ ಒಪ್ಪಂದ ಪದ್ಧತಿಯಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವ ರೈತರಿಗೆ ಕೆಜಿಗೆ 20 ರೂ. ನಿಗದಿಪಡಿಸಲು ಅವಕಾಶ ಸೃಷ್ಟಿಸುವ ಸಲುವಾಗಿ ಸಮಿತಿ ರಚನೆ ಅವಶ್ಯಕತೆ.

## ಇತಿಹಾಸದಲ್ಲಿ ಈ ದಿನ

### ಮಾರ್ಚ್-18

1922: ಮಹಾತ್ಮಾ ಗಾಂಧಿ ಅವರಿಗೆ ಬ್ರಿಟಿಷರು ದೇಶದ್ರೋಹದ ಆರೋಪದ ಮೇಲೆ 6 ವರ್ಷಗಳ ಶಿಕ್ಷೆ ವಿಧಿಸಿದರು.

1965: ಸೋವಿಯತ್ ಯಾನಿ ಅಲೆಕ್ಸಿ ಲಿಯೋನೋವ್ ಬಾಹ್ಯಾಕಾಶದಲ್ಲಿ ಮೊದಲ ಬಾರಿಗೆ ಸ್ಪೇಸ್‌ವಾಕ್ ನಡೆಸಿದ ಇತಿಹಾಸ ನಿರ್ಮಿಸಿದರು.

1990: ಪೂರ್ವ ಜರ್ಮನಿಯಲ್ಲಿ ಮೊದಲ ಬಾರಿಗೆ ಸ್ವತಂತ್ರ ಚುನಾವಣೆಗಳು ನಡೆದವು, ಇದು ಜರ್ಮನಿ ಏಕೀಕರಣದತ್ತ ಮಹತ್ವದ ಹೆಜ್ಜೆ.

2014: ರಷ್ಯಾ ಕ್ರಿಮಿಯಾ ಪ್ರದೇಶವನ್ನು ತನ್ನದಾಗಿ ಘೋಷಿಸಿಕೊಂಡಿತು, ಇದು ಜಾಗತಿಕ ರಾಜಕೀಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಯಿತು.

**ಜನನ**

1919: ಶೇಖ್ ಮುಜಿಬುರ್ ರಹ್ಮಾನ್, ಬಾಂಗ್ಲಾದೇಶದ ಸ್ಥಾಪಕ ನಾಯಕ

1959: ಲೂಕ್ ಬೆಸ್ಸನ್, ಪ್ರಸಿದ್ಧ ಫ್ರೆಂಚ್ ಚಲನಚಿತ್ರ ನಿರ್ದೇಶಕ

# ನಮ್ಮ ಸಂಸ್ಕೃತಿಯ ರುಚಿ ಉಳಿಸುವ ಪರಂಪರೆಯ ಅಡುಗೆ ಪದ್ಧತಿ



**-ಅಂತೋಣಿ ಮುತ್ತು ವಿ.**
**ಶಿಕ್ಷಕರು ಮೊ.ನಂ. 7259675543**

ಇತ್ತೀಚಿನ ದಿನಗಳಲ್ಲಿ ಅಡುಗೆಗೆ ಬಳಸುವ ಗ್ಯಾಸ್ ಕುರಿತು ಹಲವಾರು ಚರ್ಚೆಗಳು ನಡೆಯುತ್ತಿವೆ. ಕೆಲವು ಸಂದರ್ಭಗಳಲ್ಲಿ ಗ್ಯಾಸ್ ಕೊರತೆ, ಬೆಲೆ ಏರಿಕೆ ಮತ್ತು ಪರಿಸರ ಸಮಸ್ಯೆಗಳ ಕಾರಣದಿಂದ ಜನರು ಪರ್ಯಾಯ ವಿಧಾನಗಳ ಬಗ್ಗೆ ಯೋಚಿಸಲು ಆರಂಭಿಸಿದ್ದಾರೆ.

ಈ ಸಂದರ್ಭದಲ್ಲಿ ನಮ್ಮ ಪೂರ್ವಜರು ಅನುಸರಿಸಿದ್ದ ಪರಂಪರೆಯ ಅಡುಗೆ ಪದ್ಧತಿಗಳ ಮಹತ್ವ ಮತ್ತೆ ಬೆಳಕಿಗೆ ಬರುತ್ತಿದೆ. ಗ್ಯಾಸ್ ಆಧುನಿಕ ಜೀವನಕ್ಕೆ ಸೌಲಭ್ಯ ನೀಡಿದರೂ, ಪರಂಪರೆಯ ಅಡುಗೆ ಪದ್ಧತಿಗಳು ನಮ್ಮ ಸಂಸ್ಕೃತಿ, ಆರೋಗ್ಯ ಮತ್ತು ಪರಿಸರದೊಂದಿಗೆ ಆಳವಾದ ಸಂಬಂಧ ಹೊಂದಿವೆ. ಹಿಂದಿನ ಕಾಲದಲ್ಲಿ ಜನರು ಮರದ ಒಲೆ, ಮಣ್ಣಿನ ಚುಲ್ಲೆ, ಒಣಕಟ್ಟೆ ಮತ್ತು ಕೃಷಿ ಅವಶೇಷಗಳನ್ನು ಬಳಸಿಕೊಂಡು ಅಡುಗೆ ಮಾಡುತ್ತಿದ್ದರು. ಈ ವಿಧಾನಗಳು ಪ್ರಕೃತಿಯೊಂದಿಗೆ ಹೊಂದಿಕೊಂಡಿದ್ದು, ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದರಿಂದ ಅವು ಹೆಚ್ಚು ಸ್ವಾಭಾವಿಕವಾಗಿದ್ದವು. ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಅಡುಗೆ ಪದ್ಧತಿಗಳು ಇನ್ನೂ ಕೆಲವು ಕಡೆಗಳಲ್ಲಿ ಮುಂದುವರಿಯುತ್ತಿವೆ. ಈ ವಿಧಾನಗಳು ಕಡಿಮೆ ಖರ್ಚಿನದ್ದಾಗಿದ್ದು, ಜನರು ತಮ್ಮ ಸುತ್ತಲಿನ ಸಂಪನ್ಮೂಲಗಳನ್ನು ಬಳಸಿಕೊಂಡು ಸುಲಭವಾಗಿ ಅಡುಗೆ ಮಾಡಬಹುದಾಗಿತ್ತು.

ಪರಂಪರೆಯ ಅಡುಗೆ ಪದ್ಧತಿಯಲ್ಲಿ ತಯಾರಾಗುವ ಆಹಾರಕ್ಕೆ ವಿಶೇಷವಾದ ರುಚಿ ಮತ್ತು ಸುವಾಸನೆ ಇರುತ್ತದೆ. ಮರದ ಒಲೆಯ ಮೇಲೆ ಮಾಡಿದ ಅಡುಗೆ ಆಹಾರವನ್ನು ನಿಧಾನವಾಗಿ ಬೇಯಿಸುತ್ತದೆ. ಇದರಿಂದ ಅದರ ಸ್ವಾಭಾವಿಕ ರುಚಿ ಮತ್ತು ಪೌಷ್ಟಿಕತೆ ಹೆಚ್ಚು ಉಳಿಯುತ್ತದೆ ಎಂದು ಅನೇಕರು ನಂಬುತ್ತಾರೆ.

ನಮ್ಮ ಹಬ್ಬಗಳು, ಜಾತ್ರೆಗಳು ಮತ್ತು ಕುಟುಂಬದ ವಿಶೇಷ ಸಂದರ್ಭಗಳಲ್ಲಿ ಇಂತಹ ಅಡುಗೆ ವಿಧಾನಗಳನ್ನು ಬಳಸುವುದು ಸಾಮಾನ್ಯವಾಗಿತ್ತು. ಇದರಿಂದ ಕುಟುಂಬದ ಸದಸ್ಯರು ಒಟ್ಟಾಗಿ ಸೇರಿ ಅಡುಗೆ ಮಾಡುವ ಸಂಸ್ಕೃತಿ ಕೂಡ ಬೆಳೆದು ಬಂದಿತ್ತು.

ಇಂದಿನ ಯುವ ಪೀಳಿಗೆ ಆಧುನಿಕ ತಂತ್ರಜ್ಞಾನ ಮತ್ತು ಸೌಲಭ್ಯಗಳ ಮೇಲೆ ಹೆಚ್ಚು ಅವಲಂಬಿತವಾಗಿರುವುದರಿಂದ, ಪರಂಪರೆಯ ಅಡುಗೆ ಪದ್ಧತಿಗಳು ನಿಧಾನವಾಗಿ ಮರೆಯಾಗುವ ಅಪಾಯ ಎದುರಿಸುತ್ತಿವೆ. ಆದ್ದರಿಂದ ಈ ಪದ್ಧತಿಗಳ ಬಗ್ಗೆ ಅರಿವು ಮೂಡಿಸುವುದು ಬಹಳ ಮುಖ್ಯವಾಗಿದೆ. ಶಾಲೆಗಳಲ್ಲಿ, ಕುಟುಂಬಗಳಲ್ಲಿ ಮತ್ತು ಸಮಾಜದಲ್ಲಿ ನಮ್ಮ ಪಾರಂಪರಿಕ ಜ್ಞಾನವನ್ನು ಮಕ್ಕಳಿಗೆ ತಿಳಿಸುವುದರಿಂದ ಅವರು ತಮ್ಮ ಸಂಸ್ಕೃತಿಯ ಮಹತ್ವವನ್ನು ಅರಿಯಲು ಸಾಧ್ಯವಾಗುತ್ತದೆ. ಒಟ್ಟಿನಲ್ಲಿ ಗ್ಯಾಸ್ ಅಡುಗೆ ನಮ್ಮ ಜೀವನವನ್ನು ಸುಲಭಗೊಳಿಸಿದರೂ, ಪರಂಪರೆಯ ಅಡುಗೆ ಪದ್ಧತಿಗಳು ನಮ್ಮ ಸಂಸ್ಕೃತಿಯ ಒಂದು ಅಮೂಲ್ಯ ಭಾಗವಾಗಿವೆ. ಅವು ನಮ್ಮ ಪೂರ್ವಜರ ಜ್ಞಾನವನ್ನು ಪ್ರತಿಬಿಂಬಿಸುತ್ತವೆ ಮತ್ತು ಪ್ರಕೃತಿಯೊಂದಿಗೆ ಹೊಂದಿಕೊಂಡ ಬದುಕನ್ನು ಸೂಚಿಸುತ್ತವೆ. ಆದ್ದರಿಂದ ನಮ್ಮ ಸಂಸ್ಕೃತಿ, ಪರಿಸರ ಮತ್ತು ಆರೋಗ್ಯದ ಹಿತಕ್ಕಾಗಿ ಪರಂಪರೆಯ ಅಡುಗೆ ಪದ್ಧತಿಗಳನ್ನು ಬೆಂಬಲಿಸಿ ಅವುಗಳನ್ನು ಉಳಿಸುವುದು ಮತ್ತು ಮುಂದಿನ ಪೀಳಿಗೆಗೆ ಸಾಗಿಸುವುದು ನಮ್ಮ ಕರ್ತವ್ಯವಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248